

# ಶರದೃತುವಿನಲ್ಲಿ ಕವಳ



■ ರಾಜು ಎಲ್ ಎಸ್

ಹೋಗಿದ್ದ ಜಾಗಕ್ಕೆ ಮತ್ತೆ ಹೋದೆ. ವರ್ಷ ಋತು ಮತ್ತು ಶರದೃತು ನಡುವಿನ ವ್ಯತ್ಯಾಸ ನೋಡುವ ಕುತೂಹಲದಿಂದ. ಕೆಲ ವರ್ಷಗಳ ಹಿಂದೆ ಮಳೆಗಾಲದಲ್ಲಿ (ಆಗಸ್ಟ್ ತಿಂಗಳ ಕೊನೆಯಲ್ಲಿ) ಬೆಳಗಾವಿಯ ಹತ್ತಿರವಿರುವ ಈ ಕವಳ ಪ್ರದೇಶಕ್ಕೆ ಚಾರಣ ಹೋಗಿದ್ದೆ. ಇದು ಮಹಾರಾಷ್ಟ್ರದ ಅಂಬೋಲಿ ಘಾಟಿಯ ಹತ್ತಿರವಿದೆ. ಆಗ ಈ ಪ್ರದೇಶ ಈಗಿನಷ್ಟು ಪರಿಚಿತವಿರಲಿಲ್ಲ. ಬೆಳಗಾವಿಯ ಒಬ್ಬ ಟ್ಯಾಕ್ಸಿ ಚಾಲಕ ನನ್ನನಿಲ್ಲಿಗೆ ಕರೆ ತಂದಿದ್ದ.

ಆ ತಿಂಗಳಿನಲ್ಲಿ ಅಸಾಧ್ಯ ಮಳೆ ಮತ್ತು ಗಾಢವಾದ ಮಂಜು ಈ ಪ್ರದೇಶವನ್ನಾವರಿಸಿತ್ತು. ಇಲ್ಲಿಗೆ ತಲುಪಿದಾಗ, ಧಾರಾಕಾರ ಮಳೆಯಿಂದ ಆಕಾಶ ಮತ್ತು ಭೂಮಿ ಯಾವುದೆಂದು ತಿಳಿಯುತ್ತಿರಲಿಲ್ಲ. ಅಷ್ಟು ಮಂಜು ಮುಸುಕಿದ ವಾತಾವರಣ ಇಲ್ಲಿನದು. ಇಲ್ಲಿ ಸುರಿದ ಮಳೆಯ ನೀರು ರಭಸವಾಗಿ ಗುಡ್ಡದ ಅಂಚಿನ ಪ್ರಪಾತಕ್ಕೆ ದುಮುಕುತ್ತಿತ್ತು. ಗಾಳಿಗೆ ಜಲಪಾತದ ನೀರು ಮೇಲಕ್ಕೆ ಚಿಮ್ಮುತ್ತಿತ್ತು. ಅದೊಂದು ರಮಣೀಯ ದೃಶ್ಯ.